



[ಬೆಂಗಳೂರಿನ ನಿವಾಸಿಗಳಾದ ಲೇಖಕಿ ನಿಜಗುಣರ ಜೀವನ ಹಾಗೂ ಕೃತಿಗಳನ್ನು ಪರಿಚಯಿಸಿದ್ದಾರೆ.]

ಕನ್ನಡ ನಾಡು ಅತ್ಯಂತ ಪ್ರಾಚೀನವಾದುದು. ಭವ್ಯ ಸಂಸ್ಕೃತಿಯನ್ನು ಪಡೆದಿರುವ ಇತಿಹಾಸ ಇದಕ್ಕಿದೆ. ಇಲ್ಲಿನ ಸಾಂಸ್ಕೃತಿಕ ಹಾಗೂ ಧಾರ್ಮಿಕ ವಿಶೇಷತೆ ಒಬ್ಬೊಬ್ಬರಲ್ಲಿ ಒಂದೊಂದು ವಿಧವಾಗಿ ಪ್ರಕಟಗೊಂಡು ಅಪರೂಪದ ವ್ಯಕ್ತಿಗಳ ನಿರ್ಮಾಣವಾಗಿದೆ.

ಭಕ್ತಿ, ಜ್ಞಾನ, ವೈರಾಗ್ಯ, ವಿಜ್ಞಾನ, ಸಂಗೀತ—ಈ ಎಲ್ಲದರಲ್ಲೂ ಅಗ್ರಪಂಕ್ತಿಯಲ್ಲಿ ನಿಲ್ಲುವಂಥ ವ್ಯಕ್ತಿಗಳು ಕನ್ನಡದ ಮಣ್ಣಲ್ಲಿ ಮೈತಳೆದಿದ್ದಾರೆ. ಹಲವರು ಕಷ್ಟಕಾರ್ಪಣ್ಯಗಳಲ್ಲಿಯೇ ಜನಿಸಿ ಹೊನ್ನು, ಮಣ್ಣಿನ ಆಸೆಯನ್ನೆ ತೊರೆದು, ವೈರಾಗ್ಯನಿಧಿಗಳಾದರೆ, ಹಲವರು ಜನ್ಮಸಾಫಲ್ಯಕ್ಕಾಗಿ ತಮ್ಮಲ್ಲಿದ್ದುದನ್ನೆಲ್ಲಾ ಹಂಚಿ ಮುಕ್ತಿಮಾರ್ಗವನ್ನು ಅರಸಿಹೋಗಿದ್ದಾರೆ. ಆತ್ಮೋದ್ಧಾರಕ್ಕಾಗಿ ತುತ್ತು ಅನ್ನ ಉಂಡು, ತುಂಡು ಬಟ್ಟೆಯಲ್ಲೇ ಜೀವನ ಕಳೆದು ಎಲೆಮರೆಯ ಕಾಯಿಗಳಾದ ಮಹನೀಯರೂ ಆಗಿ ಹೋಗಿದ್ದಾರೆ.

ಮಾನವೀಯ ಸಂಪನ್ಮೂಲಗಳನ್ನು ಬೆಳೆಸುವ ಸಲುವಾಗಿ ಕಾಯಕವನ್ನು ನಂಬಿ ದುಡಿದು ತನ್ನೊಂದಿಗೆ ಸಹಮಾನವರನ್ನೂ ದುಡಿಮೆಯಲ್ಲಿ ತೊಡಗಿಸಿ ನಾಡಿನ ದಾರಿದ್ರ್ಯವನ್ನು ತೊಲಗಿಸಿ ಕಾಯಕವೇ ಕೈಲಾಸವೆಂಬುದನ್ನು ಅಕ್ಷರಶಃ ಸಾಧಿಸಿ ತೋರಿಸಿದ ಮಾನವೋತ್ತಮರೂ ನಮ್ಮಲ್ಲಿದ್ದಾರೆ. ಇಂಥವರಿಂದ ನಮ್ಮ ನಾಡು ದುಡಿಮೆಯಿಂದ ಶ್ರೀಮಂತವಾಗಿ ನಿತ್ಯಹರಿದ್ವರ್ಣವಾಗಿ ಬೆಳಗಿದೆ.

ಈ ದಿಸೆಯಲ್ಲಿ ರಾಜಯೋಗಿಗಳಾದ ಶಿವಯೋಗಿ ನಿಜಗುಣರ ಮಹಿಮೆ ಅಪಾರವಾದುದು. ಅವರ ವ್ಯಕ್ತಿತ್ವ ಧೀರ ಗಂಭೀರವಾದುದು, ಜ್ಞಾನ ಅಪಾರವಾದುದು, ಅನ್ಯಾದೃಶವಾದುದು. ಸಂಗೀತ-ಸಾಹಿತ್ಯಗಳಲ್ಲಿ ಅಸಮಾನರಾಗಿ, ದೇದೀಪ್ಯಮಾನವಾದ ತಮ್ಮ ಪ್ರತಿಭೆಯಿಂದ ಬೆಳಗಿ ಜಗತ್ತಿಗೆ ವಿಶೇಷ



ಕೊಡುಗೆ ನೀಡಿದಂಥ ಮಹಾನುಭಾವರು ನಿಜಗುಣ ಶಿವಯೋಗಿ.

ಅದ್ವೈತತತ್ವದಲ್ಲಿ ಅಚಲನಿಷ್ಠೆಯುಳ್ಳ ಶಿವಾನುಭವಿ ನಿಜಗುಣರು. ಇವರ ಕಾಲ ಕ್ರಿ.ಶ. ೧೫೦೦. ತಿಳಿಗನ್ನಡದಲ್ಲಿ ಅನೇಕ ಅದ್ವೈತ ಗ್ರಂಥಗಳನ್ನು ರಚಿಸಿ ಮಹದುಪಕಾರ ಮಾಡಿದ ಇವರು ದಾರ್ಶನಿಕರು, ಅಂತೆಯೇ ಸಂಗೀತಜ್ಞರು.

ಇವರು ರಾಜವಂಶದಲ್ಲಿ ಜನಿಸಿದವರು. ರಾಜ್ಯಭಾರವನ್ನು ಮಾಡುತ್ತಿದ್ದಂತೆಯೇ ಆಧ್ಯಾತ್ಮಿಕತೆಯನ್ನೂ ಮೈಗೂಡಿಸಿಕೊಂಡರು. ಶಂಭುಲಿಂಗ ಬೆಟ್ಟದ ಹತ್ತಿರದ ಗಾಳಿಪುರ ಇವರ ರಾಜಧಾನಿ. ಸುತ್ತಲಿನ ಯಳಂದೂರು, ಕೊಳ್ಳೇಗಾಲ ಮತ್ತು ಹದಿನಾರು ಪ್ರಾಂತಗಳ ರಾಜರುಗಳಿಗೆಲ್ಲಾ ನಿಜಗುಣರ ರಾಜ್ಯಭಾರ ಆದರ್ಶಪ್ರಾಯ. ರಾಜ್ಯವಿಸ್ತರಣೆಯ ವ್ಯಾಮೋಹ ಅವರಿಗಿರಲಿಲ್ಲ. ರಾಜಕಾರ್ಯಗಳಲ್ಲಿ ಅವರ ಆಪ್ತ ಸಲಹೆಗಾರರಿಗೂ ನಿರ್ಲಿಪ್ತತೆ ಬೇಸರ ತರಿಸುತ್ತಿತ್ತು. ಬೇಹುಗಾರರು ತರುತ್ತಿದ್ದ ನೆರೆಯ ರಾಜರ ದೌರ್ಬಲ್ಯದ ಸಮಾಚಾರಗಳಲ್ಲಿ ನಿಜಗುಣರಿಗೆ ಯಾವ ಆಸಕ್ತಿಯೂ ಇರುತ್ತಿರಲಿಲ್ಲ. ಅವರ ದೌರ್ಬಲ್ಯವನ್ನು ನಮ್ಮ ಸ್ವಾರ್ಥಕ್ಕೇಕೆ ಬಳಸಿಕೊಳ್ಳಬೇಕೆಂದು ಬೇಹುಗಾರರ ಉತ್ಸಾಹಕ್ಕೆ ತಣ್ಣೀರೆರಚಿ ಕಳುಹಿಸುತ್ತಿದ್ದರು.

ಆಕ್ರಮಣ ಮಾಡಿ ಯುದ್ಧಕ್ಕೆ ಮುನ್ನುಗ್ಗುವುದು ನಿಜಗುಣರಿಗೆ ಸಹಿಸದ ಮಾತು. ಮಾನವಜೀವಿಗಳನ್ನು ಪೋಷಿಸಿ, ಪ್ರೇಮಿಸಿ, ಪ್ರೇಮಸಾಮ್ರಾಜ್ಯ ಬೆಳೆಸುವುದೇ ರಾಜನ ಕರ್ತವ್ಯ. ಯುದ್ಧ ಮಾಡಿ ಮಾನವರ ಬಲಿಕೊಡುವುದು ರಾಜಲಕ್ಷಣವಲ್ಲ. ಮಾನವೀಯತೆಯನ್ನು ಬೆಳೆಸಿ ಜನರ ಮನ ಗೆಲ್ಲುವವನೇ ನಿಜವಾದ ರಾಜ ಎಂಬುದೇ ಇವರ ಧ್ಯೇಯವಾಗಿತ್ತು. ಎದುರಾಳಿಯನ್ನು ಸತ್ಕರಿಸಿ ಮಿತ್ರನಂತೆ ಕಂಡು ತನ್ನದೆಲ್ಲವನ್ನೂ ಸಮರ್ಪಿಸಿ ಅವನ ಮನಸ್ಸನ್ನು ಪರಿವರ್ತಿಸಲು ಕಾರಣರಾಗುತ್ತಿದ್ದರು.

ನಿಜಗುಣರು ಪ್ರಾಪ್ತ ವಯಸ್ಸಿಗೆ ಬರುವ ಮುನ್ನವೇ ವಿವಾಹಿತರಾಗಿದ್ದರು. ಮಂಗಳಾಂಬೆ ಅವರ ಪಟ್ಟದ ರಾಣಿ. ಈಕೆಗೆ ಪತಿಯ ನಿರ್ಲಿಪ್ತ ಮನೋಭಾವದ ಬಗೆಗೆ ತಾತ್ಸಾರವಿತ್ತು. ಆತನ ಜಂಗಮ ಪ್ರೇಮದಲ್ಲಾಗಲಿ, ದಾಸೋಹದಲ್ಲಾಗಲಿ ಆಕೆಗೆ ಶ್ರದ್ಧೆಯಿರಲಿಲ್ಲ. ವಿರೂಪಾಕ್ಷ ಈ ದಂಪತಿಗಳ ಮಗನಾಗಿ ಜನಿಸಿದ; ವಿರುದ್ಧ ದಿಕ್ಕಿನ ಇಬ್ಬರನ್ನೂ ಬೆಸೆಯುವ ಕೊಂಡಿಯಾಗುವಲ್ಲಿ ಆತನೂ ವಿಫಲನಾದನು. ಸಾಮರಸ್ಯವಿಲ್ಲದ ತಮ್ಮ ದಾಂಪತ್ಯದ ಅಳಲನ್ನು ನಿಜಗುಣರು ತಮ್ಮ ಗುರುಗಳಿಗೆ ತಿಳಿಸಿದ್ದರು.

ಗುರುಗಳ ಆಣತಿಯಂತೆ ನಿಜಗುಣರು ಪತ್ನಿಯನ್ನು ತಮ್ಮ ಮಟ್ಟಕ್ಕೇರಿಸುವ ಪ್ರಯತ್ನವನ್ನೇನೋ ಮಾಡಿದರು. ಆದರೆ ವಿರಾಗಿ ನಿಜಗುಣರ ಮನೋಭಾವದ ಕಲ್ಪನೆಯೂ ಮಂಗಳಾಂಬೆಗೆ ಇರಲಿಲ್ಲ. ಶಂಭುಲಿಂಗನ ಬೆಟ್ಟಕ್ಕೆ ಹೋಗಿ ಧ್ಯಾನದಲ್ಲಿಯೇ ದಿನಗಳೆಯುತ್ತಿದ್ದ ಪತಿಯನ್ನು ತನ್ನತ್ತ ಸೆಳೆಯಲು ಮಂಗಳೆ ಸತತ ಪ್ರಯತ್ನ ನಡೆಸುತ್ತಲೇ ಇದ್ದಳು. ಪತಿಯ ಸಾನ್ನಿಧ್ಯದಲ್ಲಿ ಸುಖ ಸಂತೋಷಗಳಲ್ಲಿರಲು ಅವಳ ಜೀವ ಹಾತೊರೆಯುತ್ತಿತ್ತು. ಜ್ಞಾನಾರ್ಜನೆಯಲ್ಲಿ, ಪರಬ್ರಹ್ಮನ ಉಪಾಸನೆಯಲ್ಲಿದ್ದ ನಿಜಗುಣರು ವೈರಾಗ್ಯಮೂರ್ತಿಯಾಗಿದ್ದರು. ಪತ್ನಿಯ ಕಡೆ ಅವರ ಮನಸ್ಸು ಹೋಗಲೇ ಇಲ್ಲ.

ಪತಿಯ ದಾಸೋಹ ಕಾರ್ಯವನ್ನು ತಿರಸ್ಕಾರದಿಂದ ಕಂಡಳು, ಮಂಗಳೆ. ಪತಿ ಶಿವನ ರೂಪದಿಂದ ಕಂಡು ಉಪಚರಿಸಿದ ಜಂಗಮರಿಗೆ ತಂಗಳನ್ನವನ್ನು ಬಡಿಸಿ ಪತಿಯನ್ನು ದಿಟ್ಟತನದಿಂದ ಎದುರಿಸಲು ನಿರೀಕ್ಷಿಸಿದ ಮಂಗಳೆಗೆ ನಿರಾಸೆ ಕಾದಿತ್ತು. ವೈರಾಗ್ಯವೇ ಮೈತಳೆದಂತಿದ್ದ ನಿಜಗುಣರು ಸಂಸಾರದಲ್ಲಿ ಜಿಗುಪ್ಸೆಗೊಂಡು ಮನೆ ತೊರೆದು ಶಂಭುಲಿಂಗನ ಬೆಟ್ಟವನ್ನೆ ತಮ್ಮ ಶಾಶ್ವತ ನೆಲೆಯಾಗಿಸಿಕೊಂಡರು. ಶಂಭುಲಿಂಗ ಗುರುಗಳು ನಿಜಗುಣರಿಗೆ ವಿಧಿವತ್ತಾಗಿ ಸನ್ಯಾಸ ದೀಕ್ಷೆಯಿತ್ತರು. ನಿಜಗುಣರು ಸನ್ಯಾಸಿಗಳಾದ ಸಮಾರಂಭದ ಅಂಗವಾಗಿ ಭಾರಿ ದಾಸೋಹ ನಡೆಯಿತು.

ಷಟ್‌ಶಾಸ್ತ್ರಗಳೆಂದು ಪ್ರಸಿದ್ಧವಾದ ಅನುಭವಸಾರ, ಕೈವಲ್ಯ ಪದ್ಧತಿ, ಪರಮಾರ್ಥ ಗೀತೆ, ಪರಮಾನುಭವ ಬೋಧೆ, ಪರಮಾರ್ಥ ಪ್ರಕಾಶಿಕೆ, ವಿವೇಕ ಚಿಂತಾಮಣಿ ಎಂಬ ಅತ್ಯಮೂಲ್ಯ ಗ್ರಂಥಗಳನ್ನು ನಿಜಗುಣರು ರಚಿಸಿದರು. ಬೆಟ್ಟದಲ್ಲಿದ್ದು ಹಲವಾರು ವರ್ಷ ತಪಸ್ಸು ಮಾಡಿ ಶಿವಯೋಗಿಯಾಗಿ, ಶಿವಾನುಭವಿಯಾದರು. 'ಅರವತ್ತುಮೂವರ ತ್ರಿವಿಧಿ' ಇವರ ಮತ್ತೊಂದು ಗ್ರಂಥ. ಶಂಭುಲಿಂಗನ ಅಂಕಿತದಲ್ಲಿ ಸಕಲ ವೇದಾಂತಸಾರವನ್ನೂ ಸಾಧಕರಿಗೆ ತಿಳಿಯುವಂತೆ ಹೇಳಿರುವುದೇ ಇದರ ವೈಶಿಷ್ಟ್ಯ

'ಕೈವಲ್ಯಪದ್ಧತಿ'ಯಲ್ಲಿ ತತ್ತ್ವೋಪದೇಶಪರವಾದ ಮತ್ತು ಶಿವಸ್ತುತಿಯ ಹಾಡುಗಳಿವೆ. "ಆರು ನಾನೆಂದು ವಿಚಾರಿಸು" "ವಿಷಮ ಸಂಸಾರವಿದನು ಕನಸೆಂದು ಅರಿ"—ಎಂದು ಸೂತ್ರರೂಪದಲ್ಲಿ ಹೇಳಿದ್ದಾರೆ. "ಬಳಸದಿರು ಅದ್ವೈತವನು ಬಾಹ್ಯದಲಿ" ಎಂಬ ಎಚ್ಚರಿಕೆಯನ್ನೂ ನಿಜಗುಣರು ನೀಡಿದ್ದಾರೆ. "ಅರಿವೆ ನೀನೆಂದು ಸದ್ಗುರು ಪೇಳೆ ತಿಳಿದವನು ಜಾಣ"—ಎಂಬ ಹಾಡಿನಲ್ಲಿ ಜ್ಞಾನಮಾರ್ಗ ಸಿದ್ಧಿಯು ಗುರುಕೃಪೆಯಿಂದ ಮಾತ್ರ ಸಾಧ್ಯವೆಂಬುದನ್ನು ತಿಳಿಸಿದ್ದಾರೆ. "ಜ್ಯೋತಿ ಬೆಳಗುತಿದೆ, ವಿಮಲ ಪರಂಜ್ಯೋತಿ ಬೆಳಗುತಿದೆ" ಎಂಬ ಸುಪ್ರಸಿದ್ಧ ಹಾಡಿನಲ್ಲಿ ತತ್ವಜ್ಞಾನ ಕಾವ್ಯಮಯವಾಗಿ ನಿರೂಪಿತವಾಗಿದೆ.

ತ್ರಿಪದಿಯ ರೂಪದಲ್ಲಿರುವ 'ಅನುಭವಸಾರ'ವು ಸಕಲ ವೇದಾಂತಸಾರವನ್ನು ಸಾಧಕರಿಗೆ ತಿಳಿಸಲೆಂದೇ ಬರೆದ ಗ್ರಂಥ. ಇದರಲ್ಲಿ ತಿಳಿಯಾಗಿ, ಉಚಿತ ದೃಷ್ಟಾಂತಗಳ ಮೂಲಕ ಆತ್ಮಸ್ವರೂಪವನ್ನು, ಅದ್ವೈತಸಿದ್ಧಿಯನ್ನು ವಿವರಿಸಿದ್ದಾರೆ. 'ಪರಮಾರ್ಥಗೀತೆ' ಗುರುಶಿಷ್ಯ ಸಂವಾದ ರೂಪದಲ್ಲಿದ್ದು ಲಲಿತ ರಗಳೆ ಮತ್ತು ಕಂದಗಳಲ್ಲಿದೆ. ಇದು ಮೋಕ್ಷಶಾಸ್ತ್ರವನ್ನು ತಿಳಿಸಿಕೊಡುತ್ತದೆ. ಜೊತೆಗೆ ಯೋಗಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ವಿಷಯಗಳು ಇದರಲ್ಲಿವೆ.

'ಕೈವಲ್ಯಪದ್ಧತಿ' ಅನುಭಾವ ಗೀತೆಗಳ ಸಂಕಲನ. 'ಪರಮಾನುಭವಬೋಧೆ' ಯಾಜ್ಞವಲ್ಕ್ಯ ಮೈತ್ರೇಯಿಯರ ಸಂವಾದರೂಪದಲ್ಲಿದೆ. ಅಷ್ಟದಿಕ್ಪಾಲಕರು, ಪರ್ವತ, ನದಿಗಳು, ಪಕ್ಷಿಗಳು, ಕಾವ್ಯಲಕ್ಷಣಗಳು, ರಾಜಲಕ್ಷಣಗಳು ಇವೇ ಅಲ್ಲದೆ ಸಂಗೀತಶಾಸ್ತ್ರದ ಸುದೀರ್ಘ ವರ್ಣನೆಯನ್ನೇ ಕೊಟ್ಟಿದ್ದಾರೆ 'ವಿವೇಕಚಿಂತಾಮಣಿ'ಯಲ್ಲಿ. ಸಪ್ತಸ್ವರೋತ್ಪತ್ತಿ, ರಾಗಲಕ್ಷಣಗಳು, ರಾಗಾಂಗಗಳು, ಮೂವತ್ತಾರು ರಾಗಗಳು, ತಂತಿವಾದ್ಯ, ವಾದ್ಯಭೇದಗಳು—ಹೀಗೆ ಸಂಗೀತಶಾಸ್ತ್ರದ ಸಾರವನ್ನೇ ಇಳಿಸಿದ್ದಾರೆ. ಆರು ಸಾವಿರ ಗ್ರಂಥಗಳಿಂದ ವಿಷಯ ಸಂಗ್ರಹಿಸಿದ ವಿಶ್ವಕೋಶ ಈ 'ವಿವೇಕಚಿಂತಾಮಣಿ'. ಕರ್ನಾಟಕ ಸಂಗೀತ–ಶಾಸ್ತ್ರಜ್ಞರಿಗೆ ಇದೊಂದು ಮಹತ್ವಪೂರ್ಣ ಆಕರ ಗ್ರಂಥ.

ಇವರಲ್ಲಿ ಕಂಡುಬರುವ ನಾದಮಾಧುರ್ಯ, ಮಾತಿನ ಸೊಗಸು ಕೃತಿಯ ಮಹತ್ವದ ಅಂಶಗಳು.

ನಿಜಗುಣರು ಕನ್ನಡದಲ್ಲಿ ಮಾತ್ರವಲ್ಲದೆ ಸಂಸ್ಕೃತದಲ್ಲೂ ಗ್ರಂಥಗಳನ್ನು ರಚಿಸಿದ್ದಾರೆ. ಅರವತ್ತುಮೂರು ಮಂದಿ ಪುರಾತನರ ಸ್ತೋತ್ರವನ್ನೂ ಬರೆದಿದ್ದಾರೆ.

"ಕೋಗಿಲೆ ಚೆಲ್ವಕೋಗಿಲೆ ಮುದ್ದು ಕೋಗಿಲೆ ಜಾಣ ಕೋಗಿಲೆ" ಎಂದು ಮನಸ್ಸನ್ನು ಕೋಗಿಲೆಗೆ ಹೋಲಿಸಿಕೊಂಡು ಹಾಡಿದ್ದಾರೆ.

"ನೋಡಲಾಗದೆ ದೇವ ನೋಡಲಾಗದೆ, ಕೂಡೆ ನಿನ್ನ ದಿಟ್ಟಿ ಮೂರು ನಾಡೆ ಲೇಸು ಮಾಡರೆನ್ನ"—ಶಿವನ ತ್ರಿನೇತ್ರಗಳ ಕಲ್ಪನೆ ಇಲ್ಲಿ ಸುಂದರವಾಗಿ ಮೂಡಿಬಂದಿದೆ. ಶಿವಕಾರುಣ್ಯವನ್ನು ಬಯಸುವ ಪ್ರಾರ್ಥನೆಯೂ ಪರಿಣಾಮಕಾರಿಯಾಗಿದೆ. ಕೊನೆಯ ಪದ್ಯ ಮಂಗಳಗೀತೆ.

**ಶ್ರೀಮದನಂತ ಸುರಜನ ಸಮ್ಮತಿಯಿಂದೆಸೆವೀ**
**ವಿವೇಕ ಚಿಂತಾಮಣಿಯೆಂಬ ಸತ್ಕೃತಿಯನಾಲಿದಿರ್ನೆಡೆ**

ನಿಜಗುಣ ಶಿವಯೋಗಿಗಳು ಸಜೀವ ಸಮಾಧಿಯ ಮೂಲಕ ಶಿವೈಕ್ಯರಾದರು. ಹಾಸುಬಂಡೆಯ ಮೆಟ್ಟಿಲುಗಳನ್ನೇರಿ ಗುಹೆಯನ್ನು ಪ್ರವೇಶಿಸಿದರು. ಬಲಭಾಗದ ಕೊನೆಯಲ್ಲಿ ಒಂದು ಚಿಕ್ಕ ಗುಹೆಯನ್ನು ಅವರೇ ಮಾಡಿಸಿದ್ದರು. ಒಳಕ್ಕೆ ಒಬ್ಬರೇ ಪ್ರವೇಶಿಸುವಷ್ಟು ಬಾಗಿಲು. ಅಲ್ಲಿ ಪದ್ಮಾಸನ ಹಾಕಿ ಕುಳಿತುಕೊಳ್ಳುವಷ್ಟೆ ಜಾಗ. ಸಮಾಧಿಗುಹೆ ಅದು. ಅದನ್ನು ಮುಚ್ಚಲು ಅಳತೆಗೆ ತಕ್ಕ ಕಲ್ಲು ಚಪ್ಪಡಿಯನ್ನೂ ಶಿವಯೋಗಿಗಳೇ ಮಾಡಿಸಿದ್ದರು.

ಗುಹೆಯನ್ನೆಲ್ಲಾ ಒಮ್ಮೆ ಪರಿಶೀಲಿಸಿ ನೋಡಿ ಹೊರಬಂದು ಶಿಷ್ಯರನ್ನುದ್ದೇಶಿಸಿ ತಾವು ಒಳಹೋಗುತ್ತಿದ್ದಂತೆಯೇ ಗುಹೆಯ ಬಾಗಿಲನ್ನು ಮುಚ್ಚುವ ಮುಹೂರ್ತವನ್ನೂ, ವಿಧಾನವನ್ನೂ ತಿಳಿಸಿದರು.

ತಾವು ಬರೆದ ಕೃತಿಗಳನ್ನೆಲ್ಲಾ ನಾಡು ನುಡಿಯ ಸೇವೆಗೆಂದು ಶಿಷ್ಯರಿಗೊಪ್ಪಿಸಿ ತಾವು ಗುಹೆ ಹೊಕ್ಕರು. ಸಮಾಧಿಸ್ಥರಾದರು. 'ನಾನು' ಎಂಬ ಪರವಸ್ತು ಜ್ಯೋತಿರೂಪವಾಗಿ ದೇಹದಿಂದ ಸಿಡಿಯಿತು. ಶಿಷ್ಯರು ಕಲ್ಲುಚಪ್ಪಡಿಯನ್ನು ಮುಚ್ಚಿದರು.

ಶಿವಯೋಗಿಯ 'ಶಿವೋऽಹಂ' ಶಬ್ದ ಬೆಟ್ಟದಲ್ಲಿ ಮಾರ್ದನಿಸುತ್ತಿತ್ತು. ಶಿಷ್ಯರು ಕರ್ಪೂರ ಜ್ಯೋತಿಯನ್ನು ಅಖಂಡವಾಗಿ ಬೆಳಗಿಸಿದರು.

**ಜ್ಯೋತಿ ಬೆಳಗುತಿದೆ, ವಿಮಲ ಪರಂಜ್ಯೋತಿ ಬೆಳಗುತಿದೆ**
**ಮಾತು ಮನಂಗಳಿಂದತ್ತತ್ತ ಮೀರಿದ**
**ಸಾತಿಶಯದ ನಿರುಪಾಧಿಕ ನಿರ್ಮಲ**
**ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ.**



ಪುಸ್ತಕ ಪರಿಚಯ

**ಶ್ರೀರಾಮಕೃಷ್ಣ ವಿವೇಕ ಶಾರದಾ**
ಲೇಖಕರು: ಸಿ.ಪಿ.ಕೆ.
ಪ್ರಕಾಶಕರು: ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಲಕ್ಷ್ಮೀ ಟಾಕೀಸ್ ಹಿಂಭಾಗ, ಮೈಸೂರು
ಪುಟ: ೯೬ ಬೆಲೆ: ರೂ. ೫೦

ಸಿ.ಪಿ.ಕೆ. ಎಂದೇ ಖ್ಯಾತರಾಗಿರುವ ಕನ್ನಡದ ಹಿರಿಯ ಸಾಹಿತಿ ಶ್ರೀ ಸಿ.ಪಿ. ಕೃಷ್ಣಕುಮಾರರು ದಿವ್ಯತ್ರಯರನ್ನು ಕಂಡದ್ದು ರತ್ನತ್ರಯರಾಗಿ. ಜೈನಧರ್ಮದ ರತ್ನತ್ರಯಗಳಾದ ಸಮ್ಯಕ್ ದರ್ಶನ, ಜ್ಞಾನ ಮತ್ತು ಚಾರಿತ್ರಗಳನ್ನು ಕ್ರಮವಾಗಿ ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು ಮತ್ತು ಶ್ರೀಮಾತೆ ಶಾರದಾದೇವಿಯರಲ್ಲಿ ಕಂಡುಕೊಂಡ ಪರಿಪೂರ್ಣ ಕವಿಹೃದಯ ಲೇಖಕರದ್ದು. ಹೀಗಾಗಿ ಅವರು ಕಡೆದ ದಿವ್ಯತ್ರಯರ ಚಿತ್ರಣಗಳು ವಿಶಿಷ್ಟವಾಗಿವೆ, ಮನೋಜ್ಞವಾಗಿವೆ ಹಾಗೂ ಹೃದಯಸ್ಪರ್ಶಿಯಾಗಿವೆ.

ಈ ಕಥಾನಕಗಳಲ್ಲಿ ದಿವ್ಯತ್ರಯರ ಜೀವನದ ವರ್ಣನೆ ಸುಲಲಿತವಾಗಿ ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. ಸರಳವಾದ ಭಾಷೆಯಲ್ಲಿ, ಮುಖ್ಯಾಂಶಗಳಲ್ಲಿ ಒಂದನ್ನೂ ಬಿಡದೆ, ಗಹನ ಜೀವನಗಾಥೆಗಳನ್ನು ಗಂಭೀರವಾಗಿ ಚಿತ್ರಿಸಿರುವುದೇ ಈ ಪುಸ್ತಕದ ವೈಶಿಷ್ಟ್ಯ. ಆಧ್ಯಾತ್ಮಿಕ ಅನ್ವೇಷಣೆಯೊಂದಿಗೆ ದಿವ್ಯತ್ರಯರ ಜೀವನದ ಮಾನವೀಯ ಮತ್ತು ಸಾಮಾಜಿಕ ಆಯಾಮಗಳನ್ನೂ ಗುರುತಿಸಲು ಲೇಖಕರು ಪ್ರಯತ್ನ ನಡೆಸಿರುವುದು ಸ್ತುತ್ಯವೇ ಸರಿ. ಅಲ್ಲದೆ, ಅವರು ಸಂಗ್ರಹಿಸಿ ಕೊಟ್ಟಿರುವ ದಿವ್ಯತ್ರಯರ ನುಡಿಗಳೂ ಸಮಂಜಸವೇ.




ಅನುಬಂಧಗಳಲ್ಲಿ ದಿವ್ಯತ್ರಯರ ಜೀವನ-ಸಂದೇಶಗಳ ಸೃಜನಾತ್ಮಕ ಚಿಂತನೆಯನ್ನು ಕಾಣುತ್ತೇವೆ. ಬದುಕಿನ ಎಲ್ಲ ದಿಶೆಗಳಲ್ಲೂ ಸಮನ್ವಯವೇ ದಿವ್ಯತ್ರಯರ ಸಂದೇಶಸಾರಸರ್ವಸ್ವ. ಅವರ ಸಂದೇಶಗಳಲ್ಲಿ ವಿಜ್ಞಾನ, ಅಧ್ಯಾತ್ಮಗಳ ಮಿಲನವಾಗುವುದಲ್ಲದೆ, ಮಾನವಸೇವೆಯೇ ಮಾಧವಸೇವೆಯೆಂಬ ಅನುಷ್ಠಾನ ಮಾರ್ಗ ಕೂಡ ದೊರಕುವುದು. ಅದರ ಸಾಂಘಿಕ ರೂಪವೇ ರಾಮಕೃಷ್ಣ ಮಹಾಸಂಘ – ಈ ಎಲ್ಲ ಅಂಶಗಳು ಲೇಖಕರ ಪ್ರಬುದ್ಧ ಭಾಷೆಯಲ್ಲಿ ಸಮರ್ಥವಾಗಿ ಒಡಮೂಡಿವೆ.

ಒಟ್ಟಿನಲ್ಲಿ ಈ ಪುಸ್ತಕ ದಿವ್ಯತ್ರಯರ ಸಾಹಿತ್ಯಸಿಂಧುವಿಗೆ ಸೇರ್ಪಡೆಯಾದ ನೂತನ ಅಮೃತಬಿಂದುವಾಗಿದೆ.

–ಸ್ವಾಮಿ ವೀರೇಶಾನಂದ